ರಾಜ್ಯದಲ್ಲಿ ಗೂಡಿನ ಮೂರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರ ಅಸ್ತಿತ್ವಕ್ಕೆ ಬಂದ ಮೇಲೆ ಸರ್ಕಾರಕ್ಕೆ ಬಂದ ಕಮೀಷನ್ ಹಣದ ಬಗ್ಗೆ

೧೯೩. ಶ್ರೀ ಜಿ. ರಾಜೂಗೌಡ (ಹನೂರು).— ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಗೂಡಿನ ಮೂರುಕಟ್ಟೆಗಳು ಮತ್ತು ರೇಷ್ಮೆ ವಿನಿಮಯ ಕೇಂದ್ರ ಅಸ್ತಿತ್ವಕ್ಕೆ ಬಂದ ಮೇಲೆ ಸರಕಾರವು ಗಳಿಸಿರುವ ಕಮೀಷನ್ ಮೊತ್ತ ಎಷ್ಟು ಹಾಗೂ ಕಳೆದ ಮೂರು ವರ್ಷದ ವಿವರ ಒದಗಿಸುವುದು.

ಆ) ಸರ್ಕಾರ ಕಮೀಷನ್ ಗಳಿಸುವ ಉದ್ದೇಶವೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ರಾಜ್ಯದ ರೇಷ್ಮೆ ಗೂಡಿನ ಮೂರುಕಟ್ಟೆಗಳು ಮತ್ತು ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಮೀಷನ್ ವಸೂಲು ಮಾಡುತ್ತಿಲ್ಲ. ಆದರೆ ಶೇಕಡ ಎರಡರಷ್ಟು (ಶೇಕಡ ಒಂದರಂತೆ ರೈತರಿಂದ ಹಾಗೂ ಶೇಕಡ ಒಂದರಂತೆ ಮೂಲು ಬಿಚ್ಚುವವರಿಂದ) ಮಾರುಕಟ್ಟೆ ಶುಲ್ಕವನ್ನು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಹಾಗೂ ಶೇಕಡ ಒಂದರಂತೆ ರೇಷ್ಮೆ ವರ್ತಕರಿಂದ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಮಾರುಕಟ್ಟೆ ಶುಲ್ಕ ವಸೂಲು ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ರೂ. ೨೨೪೩.೨೩ ಲಕ್ಷ ಮಾರುಕಟ್ಟೆ ಶುಲ್ಕ ವಸೂಲು ಮಾಡಲಾಗಿದೆ.

ವಿವರಗಳು ಈ ಕೆಳಗಿನಂತಿದೆ,

೧೯೮೭-೮೮ ರೂ. ೬೧೯.೮೪ ಲಕ್ಷ
೮೮-೮೯ ರೂ. ೭೯೭.೨೮ ಲಕ್ಷ
೮೯-೯೦ ರೂ. ೯೨೬.೧೧ ಲಕ್ಷ
(ಫೆಬ್ರವರಿ ಅಂತ್ಯದವರೆಗೆ)

ಆ) ಮಾರುಕಟ್ಟೆ ಶುಲ್ಕವು ಕರ್ನಾಟಕ ರೇಷ್ಮೆ ಬಿತ್ತನೆ ಮತ್ತು ರೇಷ್ಮೆ ನೂಲು ಅಭಿವೃದ್ಧಿ ಮತ್ತು ಬೆಲೆ ಸ್ಥಿರೀಕರಣ ನಿಧಿಯ ಅಂಶವಾಗಿದ್ದು, ನಿಧಿಯನ್ನು ರೇಷ್ಮೆ ಗೂಡು ಮತ್ತು ರೇಷ್ಮೆ ಮಾಲಿನ ಬೆಲೆ ಸ್ಥಿರೀಕರಣ, ರೇಷ್ಮೆ ಹುಳು ಸಾಕಣೆ ಅಭಿವೃದ್ಧಿ ರೇಷ್ಮೆ ನೂಲಿನ ಬಿಚ್ಚಾಣಿಕೆ ಮತ್ತು ಹುರಿ ಮಾಡುವುದು ಮತ್ತು ಸಂಬಂಧಿಸಿದ ವಿಷಯಗಳಿಗೆ ವಿನಿಯೋಗಿಸಬಹುದಾಗಿದೆ.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕೊಳಚೆ ಪ್ರದೇಶಗಳಾದಂತಹ ನಾಗಮ್ಮ ನಗರದಲ್ಲಿ ವಾಸವಾಗಿರುವಂತಹ ಬಡಜನರಿಗೆ ಪಡಿತರ ಚೀಟಿಗಳು ಇಲ್ಲದಿರುವುದು

೩೮೭. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಕೊಳಚೆ ಪ್ರದೇಶಗಳಾದಂತಹ ನಾಗಮ್ಮನಗರ, ಬಕ್ಷಿ ಗಾರ್ಡನ್, ಫ್ಲವರ್ ಗಾರ್ಡನ್, ಆಂಜನಪ್ಪ ಬ್ಲಾಕ್ ಈ ಪ್ರದೇಶಗಳಲ್ಲಿ ವಾಸವಾಗಿರುವಂತಹ ಬಹಳಷ್ಟು ಬಡಜನರಿಗೆ ಪಡಿತರ ಚೀಟಿಗಳು ಇಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಅವರುಗಳಿಗೆ ಪಡಿತರ ಚೀಟಿ ಕೊಡಲು ಸರ್ಕಾರ ಏನಾದರೂ ವ್ಯವಸ್ಥೆ ಮಾಡಿದೆಯೆ ?

ಇ) ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನತೆಗೆ ಪಡಿತರ ಚೀಟಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು. ಈ ಪ್ರದೇಶದ ಕೆಲವು ನಿವಾಸಿಗಳು ಪಡಿತರ ಚೀಟಿಯನ್ನು ಹೊಂದಿರುವುದಿಲ್ಲ

ಅ) ಹೌದು. ಇಲ್ಲಿಯವರೆಗೆ ೩,೯೩೮ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಇ) ಉಳಿದ ಕುಟುಂಬದವರು ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ನೀಡಿದಲ್ಲಿ ಸೂಕ್ತ ವಿಚಾರಣೆ ಮಾಡಿ ಪಡಿತರ ಚೀಟಿಗಳನ್ನು ನೀಡಲಾಗುತ್ತದೆ.

ಪ್ಲಾಂಟೇಷನ್ ಬೆಳೆಗಳ ಮೇಲೆ ಖರೀದಿ ತೆರಿಗೆಯನ್ನು ವಿಧಿಸಿರುವ ಬಗ್ಗೆ

೨೯೬. ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಪ್ಲಾಂಟೇಷನ್ ಬೆಳೆಗಳ ಮೇಲೆ ಖರೀದಿ ತೆರಿಗೆಯನ್ನು ವಿಧಿಸಲಾಗಿದೆಯೇ ?

ಆ) ಹಾಗಾದರೆ, ವಿಧಿಸಿರುವ ತೆರಿಗೆಯ ಪ್ರಮಾಣವೆಷ್ಟು ?

ಇ) ಪ್ಲಾಂಟೇಷನ್ ಬೆಳೆಗಳ ಮೇಲೆ ವಿಧಿಸಿರುವ ಖರೀದಿ ತೆರಿಗೆಯನ್ನು ತೆಗೆದುಹಾಕುವ ಪ್ರಸ್ತಾವನೆ ಇದೆಯೇ ?

ಶ್ರೀ ಎಂ. ರಾಜಶೇಖರಮೂರ್ತಿ(ಅರ್ಥ ಸಚಿವರು).—

ಅ) ಕಾಫಿಯ ಮೇಲೆ ಖರೀದಿ ತೆರಿಗೆ ವಿಧಿಸಲಾಗಿದ್ದು ಉಳಿದ ತೋಟಗಾರಿಕೆ ಬೆಳೆಗಳ ಮೇಲೆ ವ್ಯಾಪಾರ ತೆರಿಗೆ ವಿಧಿಸಲಾಗಿದೆ.

ಆ) ೧) ಕಾಫಿ : ಶೇಕಡ ೧೩

೨) ಟೀ : ಶೇಕಡ ೧೩

೩) ರಬ್ಬರ್ : ಶೇಕಡ ೮

೪) ಮೆಣಸು : ಶೇಕಡ ೫

೫) ಏಲಕ್ಕಿ : ಶೇಕಡ ೪

ಇ) ಇಲ್ಲ.

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ ನೋಂದಾಯಿಸಿರುವ ಕುಶಲ ಮತ್ತು ಅಕುಶಲ ಅಭ್ಯರ್ಥಿಗಳ ಬಗ್ಗೆ

೪೩೭. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿ, ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ ನೋಂದಾಯಿಸಿರುವ ಒಟ್ಟು ಕುಶಲ ಮತ್ತು ಅಕುಶಲ ಅಭ್ಯರ್ಥಿಗಳ ಸಂಖ್ಯೆ :

೨ ೧೯೫೯-೬೦ನೇ ಸಾಲಿನ ಫೆಬ್ರುವರಿ ಅಂತ್ಯದವರೆಗೆ ಉದ್ಯೋಗ ವಿನಿಮಯ ಕೇಂದ್ರಗಳ ಮೂಲಕ ಉದ್ಯೋಗ ಪಡೆದ ಒಟ್ಟು ಅಭ್ಯರ್ಥಿಗಳ ಸಂಖ್ಯೆ :

೩ ಈಗಾಗಲೇ ಉದ್ಯೋಗದಲ್ಲಿರುವ ಸಾಕಷ್ಟು ಅಭ್ಯರ್ಥಿಗಳು ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

೪ ಹಾಗಿದ್ದಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯನ್ನು ಪರಿಪೂರ್ಣಗೊಳಿಸುವ ಸಲುವಾಗಿ ತೆಗೆದುಕೊಂಡ ಕ್ರಮ.

ಶ್ರೀ ಬಿ. ಶಿವಣ್ಣ(ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು).—

೧ ಕುಶಲ — ೮,೭೨,೯೬೬

ಅಕುಶಲ — ೩,೭೩,೨೯೯

೨ ೭,೩೦೬

೩ ಹೌದು